

# ಅನುಷ್ಕಾ ಈಗ ಸಸ್ಯಾಹಾರಿ!

'ಪ್ರಿಕೆ'ಯ 'ಜಗಜ್ಜನನಿ' ಬದಲಾಗುತ್ತಿದ್ದಾಳೆ. ಆಗಲೇ ಒಮ್ಮೆ ತುಟಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಬದಲಾಗಿರುವ ಅನುಷ್ಕಾ ಶರ್ಮಾ ಇನ್ಯಾವ ರೀತಿ ಬದಲಾಗಲಿದ್ದಾಳೆ? ಈ ಸಲ ಆಕೆ ಮತ್ತೆ ಮುಖದ 'ವಾಸ್ತು' ಬದಲಿಸುವ ಸಾಹಸಕ್ಕೆ ಕೈಹಾಕಿಲ್ಲ. ಬದಲಾಗಿ ಆಹಾರ ಪದ್ಧತಿಯಲ್ಲಿ ಮಾರ್ಪಾಡು ಮಾಡಿಕೊಳ್ಳಲು ದೃಢ ನಿಶ್ಚಯ ಮಾಡಿಸಿಕೊಂಡಿದ್ದಾಳಂತೆ.

ಬಿ–ಟೌನ್‌ನಲ್ಲಿ ಒಂದು ಕಾಲದಲ್ಲಿ 'ಝೀರೊ ಸೈಜ್' ಖಯಾಲಿ ಬೆಳೆದಿತ್ತು. ಎಲ್ಲಾ ನಟಿಯರೂ ತಮ್ಮ ಶರೀರವನ್ನು ಬಡಕಲಾಗಿಸುವುದರ ಬಗ್ಗೆಯೇ ಚಿಂತಿಸುತ್ತಿದ್ದರು. ಆದರೆ ಅನುಷ್ಕಾ ಅದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಹೀಗಿದ್ದೂ ಬಾಲಿವುಡ್‌ನ ಅತ್ಯಂತ ಫಿಟ್ ನಟಿಯರಲ್ಲಿ ಒಬ್ಬಳು ಎಂಬ ಹೆಗ್ಗಳಿಕೆಗೆ ಪಾತ್ರಳಾದಾಕೆ. ಮಾಂಸಾಹಾರ ಖಾದ್ಯಗಳೆಂದರೆ ಮುಖವರಳಿಸುತ್ತಿದ್ದ ಅನುಷ್ಕಾ, ಈಗ ಸಂಪೂರ್ಣ ಸಸ್ಯಾಹಾರಿಯಾಗುತ್ತಿದ್ದಾಳೆ. ಇದಕ್ಕೆ 'ವಿಕೆ' (ವಿರಾಟ್ ಕೊಹ್ಲಿ) ಅವರಂತೂ ಕಾರಣವಲ್ಲ ಬಿಡಿ. ಪ್ರಾಣಿ ಹಿಂಸೆ ವಿರುದ್ಧ ದನಿ ಎತ್ತುವ 'ಪೇಟಾ'ದ ರಾಯಭಾರಿಯಾದಳೋ ಎಂಬ ಅನುಮಾನವೂ ಬೇಡ.

ಅನುಷ್ಕಾ, ಮಾಂಸಾಹಾರದಿಂದ ಸಂಪೂರ್ಣ ಸಸ್ಯಾಹಾರಿಯಾಗುತ್ತಿರುವುದು ತನ್ನ ಮುದ್ದಿನ ನಾಯಿಯ ಕಾರಣಕ್ಕೆ. ಸಾಮಾನ್ಯವಾಗಿ ನಾಯಿಗಳು ಮಾಂಸಾಹಾರವೆಂದರೆ ಬಾಲ ಇನ್ನಷ್ಟು ಜೋರಾಗಿ ಅಲ್ಲಾಡಿಸುತ್ತವೆ. ಆದರೆ ಅನುಷ್ಕಾಳ ನಾಯಿ ಮಾಂಸ ಕಂಡರೆ ಮುಖ ಸಿಂಡರಿಸುತ್ತದೆಯಂತೆ. ಅದಕ್ಕೆ ಕಾರಣ ಅನುಷ್ಕಾಗೂ ತಿಳಿದಿಲ್ಲ. ಆದರೆ ತನ್ನ ಪ್ರೀತಿಯ ನಾಯಿ ನಿರಾಕರಿಸುವ ಊಟದ ಶೈಲಿಯನ್ನು ತಾನು ಸೇವಿಸುವುದು ಎಷ್ಟು ಸರಿ ಎಂದು ಆಕೆಗೆ ಅನಿಸಿದೆ. ಅದಕ್ಕೇ ತನಗೆ ಅತಿ ಇಷ್ಟವೆನಿಸುವ ಪಂಜಾಬಿ ಶೈಲಿ ಆಹಾರಕ್ಕೆ ಗುಡ್ ಬೈ ಹೇಳಿದ್ದಾಳಂತೆ.

ಮನೆಯಲ್ಲಿ ಇದ್ದಾಗ ಹೆಚ್ಚಿನ ಸಮಯವನ್ನು ನಾಯಿಯ ಜತೆಯಲ್ಲಿಯೇ ಕಳೆಯುವ ಅನುಷ್ಕಾ, ನಾಯಿಯನ್ನು ತನ್ನ ಶೈಲಿಗೆ ತಿದ್ದುವ ಗೋಜಿಗೆ ಹೋಗದೆ, ಅದರ ಇಷ್ಟಕ್ಕೆ ತಕ್ಕಂತೆ ತಾನೂ ಬದಲಾಗುತ್ತಿರುವುದು ವಿಶೇಷ. ಇದರಿಂದ ನಾಯಿ ಖುಷಿ ಪಟ್ಟಿತೋ ಇಲ್ಲವೋ ಎನ್ನುವುದು ಗೊತ್ತಾಗಿಲ್ಲ! ವಿರಾಟ್ ಕೊಹ್ಲಿಯೂ ಸಸ್ಯಾಹಾರಿ ಆಗಬಹುದೆ.. ಎನ್ನುವುದೀಗ ಕುತೂಹಲ!



# ಸೋನಂ ಪದವಿ!

ನಟನೆ, ಗಾಸಿಪ್‌ಗಳಲ್ಲಿ ಹತ್ತಾರು ಪದವಿಗಳನ್ನು ಗಳಿಸಿರುವ ಈ ಸುಂದರಿಗೆ ಓದಿನಲ್ಲಿ ಪದವಿ ಮಾತ್ರ ಇನ್ನೂ ಸಿಕ್ಕಿಲ್ಲ ಎಂಬ ಬೇಸರವಿತ್ತು. ಹಾಗೂ ಹೀಗೂ ಬಿಡುವು ಮಾಡಿಕೊಂಡು ಪದವಿ ಗಳಿಸಲು ಕಠಿಣ ಮನಸು ಮಾಡಿದ್ದಾರೆ ನಟಿ ಸೋನಂ ಕಪೂರ್– ಅದೂ ಸಾಹಿತ್ಯದ ವಿಷಯದಲ್ಲಿ.

ಅನಿಲ್ ಕಪೂರ್‌ನ ಮಗಳಾಗಿದ್ದರೂ ಸೋನಂಗೆ ಜೀವನವೇನೂ ಹೂವಿನ ಹಾದಿ ಎನಿಸಿಲ್ಲ. 17ನೇ ವಯಸ್ಸಿಗೆ ಸಂಪೂರ್ಣವಾಗಿ ಸಿನಿಮಾದಲ್ಲಿ ತೊಡಗಿಕೊಂಡ ಈಕೆಗೆ ಸಿನಿಮಾರಂಗದ ಒತ್ತಡದ ಬದುಕೇ ಸರ್ವಸ್ವ ಆಗಿತ್ತು. ಈ ಒತ್ತಡದಲ್ಲಿ ಓದು ಅರ್ಧಕ್ಕೆ ನಿಂತಿತು. ಮಗಳಿಗೆ ಪದವಿಯನ್ನೂ ಪಡೆಯಲು ಸಾಧ್ಯವಾಗಲಿಲ್ಲ ಎಂಬ ಚಿಂತೆ ಅಪ್ಪನದ್ದಾದರೆ, ವೈಯಕ್ತಿಕ ಬೆಳವಣಿಗೆಗೋಸ್ಕರ ಓದಿನಿಂದ ದೂರ ಸರಿದಿದ್ದಕ್ಕೆ ಪಶ್ಚಾತ್ತಾಪ ಮಗಳಲ್ಲಿ. ಕಾಲೇಜಿನಲ್ಲಿಯೇ ಇದ್ದು ಓದಿದ್ದರೆ ಈಗ ಬೆಳೆದಿರುವುದಕ್ಕಿಂತ ಇನ್ನಷ್ಟು ಉತ್ತಮ ವ್ಯಕ್ತಿಯಾಗಿ ಬೆಳೆಯಬಹುದಿತ್ತು ಎನ್ನುವುದು ಸೋನಂ ಅಭಿಪ್ರಾಯ. ಒಂದಿಲ್ಲೊಂದು ಸಿನಿಮಾಗಳಲ್ಲಿ ಬಿಜಿಯಾಗಿರುವ ಸೋನಂಗೆ ಓದಲು ಸಮಯವೇ ಸಿಗುತ್ತಿರಲಿಲ್ಲ. ಆದರೆ ಅರ್ಧಕ್ಕೆ ಮೊಟಕುಗೊಳಿಸಿದ ಓದು ಆಗಾಗ ನೀನು ವಿದ್ಯಾವಂತೆಯಲ್ಲ ಎಂದು ಚುಚ್ಚುತ್ತಿತ್ತಂತೆ. 'ಯಾವ ಸ್ಥಾನಕ್ಕೆ ಏರಿದ್ದರೂ ಒಂದು ಮಟ್ಟದ ವಿದ್ಯಾಭ್ಯಾಸ ಇಲ್ಲದಿದ್ದರೆ ಅದು ನಿಷ್ಪ್ರಯೋಜಕ. ಅದರಿಂದ ನಮ್ಮ ನೈತಿಕ ಸ್ಥಾನಮಾನ ಕುಸಿಯುತ್ತದೆ' ಎಂದು ಆಕೆಗೆ ಅನಿಸಿದೆ. ಈ ಕಾರಣಕ್ಕಾಗಿಯೇ ಮತ್ತೆ ಪುಸ್ತಕ ಹಿಡಿಯಲು ಮನಸು ಮಾಡಿದ್ದಾಳೆ. ಬಾಂಬೆ ವಿಶ್ವವಿದ್ಯಾಲಯದಲ್ಲಿ ದೂರಶಿಕ್ಷಣದ ಮೂಲಕ ಪದವಿ ಪಡೆಯಲು ಸೋನಂ ಹೊರಟಿದ್ದಾಳೆ.

■ ಅಮಿ